ಅಸಲು ದಾವಾ ನಂ. 84/2024
ಪಿ ಡಬ್ಲು-2

ದಿನಾಂಕಃ 18-07-2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟೀಸವಾಲುಃ- ಪ್ರತಿವಾದಿ ನಂ. **1, 6, 7** ರವರ ಪರ ಶ್ರೀ. ಯು ಎಸ್ ಕೆ ವಕೀಲರಿಂದ.</u>

ಮೃತ ಬಸವಣ್ಣೆಪ್ಪ ನನಗೆ ಸ್ವಂತ ಅಣ್ಣ ಆಗಬೇಕು. ಯಲ್ಲವ್ವ ಬಸವಣ್ಣೆಪ್ಪ ಇವರ ಮೊದಲನೇ ಹೆಂಡತಿ ಇರುತ್ತಾರೆ. ಬಸವಣ್ಣೆಪ್ಪ ಇವರ 2 ನೇ ಹೆಂಡತಿಯ ಹೆಸರು ಬಸವ್ವ ಇರುತ್ತದೆ. ಯಲ್ಲವ್ವ ಇವಳ ಹೊಟ್ಟೆಯಿಂದ ಪ್ರತಿವಾದಿ ನಂ.1 ಮಾತ್ರ ಜನಿಸಿರುತ್ತಾರೆ. 1 ನೇ ಪ್ರತಿವಾದಿಗೆ ಪ್ರತಿವಾದಿ ನಂ.2 ಮೊದಲನೇ ಹೆಂಡತಿ ಮತ್ತು ಪ್ರತಿವಾದಿ ನಂ.6 ಎರಡನೇ ಹೆಂಡತಿ ಇರುತ್ತಾರೆ. ಬಸವಣ್ಣೆಪ್ಪ ಯಲ್ಲವ್ವ ಇವರು ತೀರಿಕೊಂಡ ನಂತರ ಬಸವ್ವ ಇವರನ್ನು ವಿವಾಹವಾಗಿರುತ್ತಾರೆ ಎಂದರೆ ಸರಿ. 1 ನೇ ಪ್ರತಿವಾದಿಯನ್ನು ಬಸವ್ವಳೇ ಜೋಪಾನ ಮಾಡಿರುತ್ತಾಳೆ ಎಂದರೆ ಸರಿ. ಬಸವಣ್ಣೆಪ್ಪ ಬಸವ್ವ ಇವಳನ್ನು ವಿವಾಹವಾದಾಗ 1 ನೇ ಪ್ರತಿವಾದಿಯ ವಯಸ್ಸು 4 ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ನನ್ನ ಮತ್ತು ನನ್ನ ಸಹೋದರ ಬಸವಣ್ಣೆಪ್ಪ ಇವರ ಹೆಸರಿನಲ್ಲಿ ದಾವಾ ಜಮೀನು ಒಳಗೊಂಡು ಆಸ್ತಿಗಳು ಇದ್ದವು ಎಂದರೆ ಸರಿ. ನಮಗೆ ಸದರಿ ಆಸ್ತಿಗಳು ಹಿರಿಯರಿಂದ ಬಂದ ಆಸ್ತಿಗಳು ಇರುತ್ತವೆ. ಆ ಆಸ್ತಿ ಸರ್ವೇ ನಂ.41/1 ಬಿ ಆಗಿತ್ತು ಎಂದರೆ ಸರಿ. ಅದಕ್ಕೆ ಈಗ ಸರ್ವೇ ನಂ.41/5 ಎಂದು ಮಾಡಲಾಗಿರುತ್ತದೆ ಎಂದರೆ ಸರಿ. ಬಸವಣ್ಣೆಪ್ಪ ಇವರ ಹೆಸರಿನಲ್ಲಿ ಸರ್ವೇ ನಂ.41/1 ಅ ಇತ್ತು ಎಂದರೆ ಸರಿ. ಅದರ ಹೊಸ ಸರ್ವೇ ನಂ.41/1 ಎಂದರೆ ಸರಿ. ಸದರಿ 2 ಆಸ್ತಿಗಳು ನನ್ನ ಮತ್ತು ಬಸವಣ್ಣೆಪ್ಪ ಇವರ ಸಂಯುಕ್ತ ಮಾಲೀಕತ್ವದಲ್ಲಿ ಇದ್ದವು ಎಂದರೆ ಸರಿ. ನಂತರ ನಾನು ಮತ್ತು ಬಸವಣ್ಣೆಪ್ಪ ಪಾಲು ವಿಭಾಗ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ದಾವಾ ಆಸ್ತಿಯು ಬಸವಣ್ಣೆಪ್ಪ ತೀರಿಕೊಂಡ ನಂತರ 1 ನೇ ಪ್ರತಿವಾದಿಗೆ ಬಂದಿರುತ್ತದೆ ಎಂದರೆ ಸರಿ. 1 ನೇ ಪ್ರತಿವಾದಿಯು ಸದರಿ ಆಸ್ತಿಯನ್ನು ತನ್ನ ಮಕ್ಕಳಾದ ಪ್ರತಿವಾದಿ ನಂ.3 ಮತ್ತು 4 ಇವರ ಹೆಸರಿಗೆ ಹಚ್ಚಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಅವರು ಗುಂಡಾಗಿರಿ ಮಾಡಿ ತಮ್ಮ ಹೆಸರು ಹಚ್ಚಿಕೊಂಡಿರುವುದಾಗಿ ಮುಂದುವರೆದು ನುಡಿಯುತ್ತಾರೆ.

2. ಬಸವ್ವಳಿಗೆ ವಾದಿ ನಂ.1 ಮತ್ತು 2 ಹಾಗೂ ಮೃತ ನೀಲವ್ವ ಮಕ್ಕಳು ಎಂದರೆ ಸರಿ. ಪ್ರತಿವಾದಿ ನಂ.2 ಒಂದನೇ ಪ್ರತಿವಾದಿಯರೊಂದಿಗೆ ಬಾಳುವೆ ಕುರಿತು ಮನಸ್ತಾಪ ಮಾಡಿಕೊಂಡು 30-40 ವರ್ಷಗಳಿಂದ ಬೇರೆ ವಾಸ ಮಾಡುತ್ತಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 6 ನೇ ಪ್ರತಿವಾದಿಗೆ ತವರು ಮನೆಯಿಂದ 3 ಎಕರೆ 4 ಗುಂಟೆ ಜಮೀನು ಬಂದಿತ್ತು ಎಂದರೆ ಇರಬಹುದು. ಅದನ್ನು 6 ನೇ ಪ್ರತಿವಾದಿ 12 ವರ್ಷಗಳ ಹಿಂದೆ ಮಾರಾಟ ಮಾಡಿದ್ದರು ಎಂದರೆ ಸರಿ. ಆ ಹಣದಿಂದ ಸವಣೂರಿನಲ್ಲಿ ವಾಸ ಯೋಗ್ಯ 02 ಗುಂಟೆ ಜಮೀನು ಖರೀದಿಸಿರುತ್ತಾರೆ ಎಂದರೆ ಸರಿ. ಉಳಿದ ಹಣವನ್ನು ಪ್ರತಿವಾದಿ ನಂ.3 ಮತ್ತು 4 ಇವರಿಗೆ 6 ನೇ ಪ್ರತಿವಾದಿ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 02 ಗುಂಟೆ ಜಮೀನಿನಲ್ಲಿ 7 ನೇ ಪ್ರತಿವಾದಿ ಆಸ್ಪತ್ರೆ ಕಟ್ಟಿಸಿದ್ದರು ಎಂದರೆ ಸರಿ. 1 ನೇ ಪ್ರತಿವಾದಿ ತನ್ನ ಗಂಡು ಮಕ್ಕಳಿಗೆ ಆಸ್ತಿಯನ್ನು ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಹಾಗೇ ಜಮೀನು ಬಿಟ್ಟುಕೊಟ್ಟಿದ್ದರಿಂದ ವಾರಸಾ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ ಎಂದರೆ ಸರಿಯಲ್ಲ. ವಾದಿಯರಿಗೆ ದಾವಾ ಆಸ್ತಿಯಲ್ಲಿ ಪಾಲು ಇದ್ದಷ್ಟೇ 1 ನೇ ಪ್ರತಿವಾದಿಗೆ ಸಹ ಪಾಲು ಇರುತ್ತದೆ ಎಂದರೆ ಸರಿ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೆ.ಕೆ.ಸರಿ.ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ).